# MANGALORE MARKET REPORTS

Since 1975



REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244



Vol.48 | ENGLISH DAILY | Subscription Yearly - Rs. - | WEDNESDAY | 2-11-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಪಾಮೆಣ್ಣೆ ಫ್ಯೂಚರ್ ದರ 2 ತಿಂಗಳ ಗರಿಷ್ಠ ಮಟ್ಟಕ್ಕೆ

ಇಂಡೋನೇಶಿಯಾ ಪಾಮೆಣ್ಣೆಯ ದರಸೂಚಿ ಹೆಚ್ಚಳದ ನಂತರ ಮಲೇಶಿಯನ್ ಪಾಮೆಣ್ಣೆ ದರ ಹಿಂದಿನ 2 ತಿಂಗಳ ಗರಿಷ್ಠ ಮಟ್ಟಕ್ಕೇರಿದ್ದು, ಇಂಡೋನೇಶಿಯಾ ನವೆಂಬರ್ ಪೂರ್ವಷಾಡದ ತನಕ ದರಸೂಚಿಯನ್ನು 8 ಶೇಕಡಾ ಹೆಚ್ಚಳಗೊಳಿಸಿ US $ 770.88 ಕ್ಕೆ ನಿಗದಿಗೊಳಿಸಿದೆ. ಈಗ ಇಂಡೋನೇಶಿಯಾದ ಕಚ್ಚಾ ಪಾಮೆಣ್ಣೆಗಿಂತ ಮಲೇಶಿಯಾದ ಕಚ್ಚಾ ಪಾಮೆಣ್ಣೆ ದರ ಆಕರ್ಷಕವಾಗಿದೆಯೆನ್ನಲಾಗಿದೆ. ಚೀನಾದ ದಲಿಯನ್ ಮಾರುಕಟ್ಟೆಯಲ್ಲೂ ಪಾಮೆಣ್ಣೆ ದರ 4.5 ಶೇಕಡಾ ಹಾಗೂ ಸೋಯಾಬೀನ್ ಎಣ್ಣೆ ದರ 2.8 ಶೇಕಡಾ ಹೆಚ್ಚಳವಾಗಿದೆಯೆನ್ನಲಾಗಿದೆ. ಆದರೂ ಚಳಿಗಾಲದ ಸಮಯದಲ್ಲಿ ಪಾಮೆಣ್ಣೆ ಬೇಡಿಕೆ ಇಳಿಕೆಯಾಗುವ ಸಾಧ್ಯತೆಯಿದೆಯೆನ್ನಲಾಗಿದೆ. ಪಾಮೆಣ್ಣೆ ದರ ಮತ್ತೆ ಹೆಚ್ಚಳಗೊಂಡು 12 ವಾರಗಳ ಗರಿಷ್ಠ ಮಟ್ಟ ತಲುಪಿದೆ. ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ 4.8 ಶೇಕಡಾ ಹೆಚ್ಚಳ ( 203 ರಿಂಗಿಟ್ಸ್ ಹೆಚ್ಚಳವಾಗಿ $ 919.85 ಅಥವಾ 4361 ರಿಂಗಿಟ್ಸ್ ಪ್ರತಿಟನ್‌ಗೆ ಆಗಿದೆಯೆನ್ನಲಾಗಿದೆ.

## ಖಾದ್ಯ ತೈಲ ದಾಸ್ತಾನು ನಿರ್ಬಂಧ ಹಿಂತೆಗೆತ

ಸರಕಾರ ತಾನು ವಿಧಿಸಿದ್ದ ಖಾದ್ಯ ತೈಲ ದಾಸ್ತಾನು ಮೇಲೆ ನಿರ್ಬಂಧ ಹಿಂದೆಗೆದಿದೆಯೆನ್ನಲಾಗಿದೆ. ಸಗಟು ಮಾರಾಟಗಾರರು, ದೀರ್ಘ ಸರಪಣಿ ಪೂರೈಕೆದಾರರು ಹಾಗೂ ಸೂಪರ್ ಮಾರ್ಕೆಟ್‌ಗಳಿಗೆ ನಿರ್ಬಂಧದ ವಿನಾಯಿತಿ ಅನ್ವಯವೆನ್ನಲಾಗಿದೆ.

## ಕಟಾವಿನ ಸಂದರ್ಭದಲ್ಲಿ ಕಾಫಿ ದರ ಇಳಿಕೆ

ಹಿಂದಿನ ಕೆಲವು ವಾರಗಳ ಹಿಂದೆ 50ಕೆ.ಜಿ ಚೀಲ ಅರೆಬಿಕಾ ಕಾಫಿ ಬೀಜ ರೂ.17000 ಕ್ಕೆ ತಲುಪಿದ್ದ ದರ ಈಗ ರೂ.14000 ರಿಂದ 14500 ಕ್ಕೆ ಇಳಿಕೆಯಾಗಿದೆಯೆನ್ನಲಾಗಿದೆ. ಕರ್ನಾಟಕದಲ್ಲಿ ಕಟಾವಿನ ಸಮಯದಲ್ಲಿ ದರ 15 ಶೇಕಡಾ ಇಳಿಕೆಯಾಗಿದೆ. ಜಾಗತಿಕ ದರ ಇಳಿಕೆ, ಆರ್ಥಿಕ ಹಿನ್ನಡೆಯ ಭಯ, ಪೂರೈಕೆ ಉತ್ತಮಗೊಳ್ಳುವ ನಿರೀಕ್ಷೆ ಇತ್ಯಾದಿ ಹಲವು ಕಾರಣಗಳಿಂದ ದಾಖಲೆ ಮಟ್ಟಕ್ಕೇರಿದ ದರ ಇಳಿಕೆಯಾಗಿದೆಯೆನ್ನಲಾಗಿದೆ. ಆದರೂ ಹಿಂದಿನ ವರ್ಷ ಈ ಸಮಯದಲ್ಲಿದ್ದ ದರಕ್ಕಿಂತ ಈಗಿನ ದರ ಅಧಿಕವಿದೆ. ಅರೆಬಿಕಾ ಚೆರ್ರಿ ಹಾಗೂ ರಾಬೆಸ್ಟಾ ಕಾಫಿ ದರಗಳೂ ಇಳಿಕೆಯಾಗಿವೆ.

## ನವೆಂಬರ್ 2022 ರ ಸಕ್ಕರೆ ಮಾರಾಟ ಕೋಟಾ 22 ಲಕ್ಷ ಟನ್

ನವೆಂಬರ್ ಸಕ್ಕರೆ ದೇಶೀ ಮಾರಾಟ ಕೋಟಾ 22 ಲಕ್ಷ ಟನ್‌ಗಳಾಗಿವೆಯೆನ್ನಲಾಗಿದೆ. ಇದು ಹಿಂದಿನ ವರ್ಷದ ಈ ತಿಂಗಳ ಕೋಟಾಕ್ಕಿಂತ 50 ಸಾವಿರ ಟನ್ ಕಡಿಮೆ ಹಿಂದಿನ ತಿಂಗಳ ಮಾರಾಟ ಕೋಟಾ 23.5 ಲಕ್ಷ ಟನ್‌ಗಳಾಗಿತ್ತು.